**ಆರ್ ಎ ನಂ. 14/2024**
**ಪಿ ಡಬ್ಲ್ಯೂಃ 01**

**ದಿಃ 25-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ನಂ 1 ಮತ್ತು 2 ರ ಪರ ಶ್ರೀ ಆರ್ ಬಿ ಎಚ್ ವಕೀಲರಿಂದಃ**

ನಮ್ಮ ಊರು ಬೆಲವಂತರ. ಕಲಘಟಗಿಯಿಂದ 4 ಕಿ ಮಿ ಅಂತರದಲ್ಲಿ ಇದೆ. ನಮ್ಮ ಮುಖ್ಯ ಉದ್ಯೋಗ ಒಕ್ಕಲುತನ. ಒಕ್ಕಲುತನಕ್ಕೆ ಬೇಕಾದ ಸಾಮಗ್ರಿಗಳನುನ ಖರೀದಿಸಲು ವಾರದಲ್ಲಿ 3-4 ಸಲ ಕಲಘಟಗಿಗೆ ಬಂದು ಹೋಗುತ್ತೇನೆ ಅಂದರೆ ಸಾಕ್ಷಿ ಅವಶ್ಯಕತೆ ಇದ್ದಾಗ ಬರುತ್ತೇನೆ ಎನ್ನುತ್ತಾರೆ. ನಾವು ಹೊಲದಲ್ಲಿ ಕಬ್ಬು, ಹತ್ತಿ ಬೆಳೆಯುತ್ತೇವೆ ಅಂದರೆ ನಿಜ. ಹತ್ತಿ ಮತ್ತು ಕಬ್ಬು ಬೆಳೆಗೆ ಔಷದಿ ಸಿಂಪರಣೆ ಮಾಡಲು ಮೇಲಿಂದ ಮೇಲೆ ಅಂಗಡಿ ಬರಬೋಕಗುತ್ತದೆ ಅಂದರೆ ನಿಜ.

ಸರ್ವೆ ನಂ 218 ರಲ್ಲಿ ಕಬ್ಬಿನ ಬೆಳೆ ಇದ್ದು ಒಂದು ಎಕರೆಗೆ 25 ರಿಂದಂ 30 ಟನ್ ಕಬ್ಬು ಬೆಳೆಯುತ್ತೇವೆ. ಸದರಿ ಜಮೀನಿಗೆ ಬೋರವೆಲ್ ನೀರಿನ ಸೌಕರ್ಯ ಇರುತ್ತದೆ. ಒಂದು ಟನ್ ಕಬ್ಬಿಗೆ ರೂ 3000/- ರಿಂದ ರೂ 3500/- ಬೆಲೆ ಇದೆ ಅಂದರೆ ಸಾಕ್ಷಿ ರೂ 2000/- ರಿಂದ ರೂ 2500/- ಇರುತ್ತದೆ. ಗೋಂಜಾಳ ಬೆಳೆ ಬೆಳೆದರೆ ಕಡಿಮೆ ಅಂದರು 20 ಕ್ವಿಂಟಲ್ ಎಕರೆಗೆ ಬೆಳೆಯುತ್ತದೆ ಅಂದರೆ ಸರಿಯಲ್ಲ. 1ನೇ ಮೇಲ್ಮನವಿದಾರ ನನ್ನ ಅಣ್ಣ. 2ನೇ ಮೇಲ್ಮನವಿದಾರಳು ಅತ್ತಿಗೆ.

ದಾಖಲೆಯಲ್ಲಿ ನಮೂದಿಸಿದ ದಿನಾಂಕದಿಂದ ನನಗೆ ಹುಷಾರ ಇಲ್ಲ ಅಂದರೆ ಸರಿಯಲ್ಲ. ನನಗೆ ಸುಮಾರು 6 ತಿಂಗಳಿನಿಂದ ನರ ಹಿಡಿದುಕೊಂಡಿರುತ್ತದೆ. ನನಗೆ ನಡೆದಾಡಲು ಯಾವುದೆ

ತೊಂದರೆ ಇರಲಿಲ್ಲ ಅಂದರೆ ಸರಿಯಲ್ಲ. ಶಸ್ತ್ರ ಚಿಕಿತ್ಸೆ ಆಗುವ 4-5 ತಿಂಗಳಿನಿಂದ ನಾನು ಆಸ್ಪತ್ರೆಗೆ ತೋರಿಸುತ್ತಿದ್ದೇನೆ. ಸದರಿ ಅವದಿಯಿಂದ ನನಗೆ ಹುಷಾರ ಇಲ್ಲ. ನವಂಬರ 2024 ರಿಂದ ನನಗೆ ಹುಷಾರ ಇಲ್ಲ ಅಂದರೆ ನಿಜ. ಅದಕ್ಕಿಂತ ಮುಂಚೆ ನಾನು ಹುಷಾರಾಗಿದ್ದೆ.

ನಮ್ಮ ಅಣ್ಣ ಮಂಜಯ್ಯನಿಗೆ ಕಾಲು ನೋವು ಆಗಿದ್ದರಿಂದ ಹುಷಾರ ಇರಲಿಲ್ಲ ಎಂದು ಅರ್ಜಿಯಲ್ಲಿ ತಿಳಿಸಿದ್ದೇನೆ. ಸದರಿಯವರಿಗೆ ಒಂದು ಸಲ ಕಲಘಟಗಿ ಆಸ್ಪತ್ರೆಗೆ ತೋರಿಸಿದ್ದೇವೆ. ನಂತರ ಹುಬ್ಬಳ್ಳಿ ಸುಚಿರಾಯ ಆಸ್ಪತ್ರೆಗೆ ತೋರಿಸಿದ್ದೇವೆ. ಆಸ್ಪತ್ರೆಗೆ ತೋರಿಸಿದ ಬಗ್ಗೆ ವೈದ್ಯರು ದಾಖಲೆ ನೀಡುತ್ತಾರೆ. ಸದರಿ ದಾಖಲೆಗಳನ್ನು ಹಾಜರ ಪಡಿಸಿಲ್ಲ ಅಂದರೆ ಸರಿಯಲ್ಲ. ನಮ್ಮ ಅಣ್ಣನಿಗೆ ಯಾವುದೆ ಅನಾರೋಗ್ಯ ಇರುವುದಿಲ್ಲ ಆದ್ದರಿಂದ ಅವರ ಚಿಕಿತ್ಸೆಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರ ಪಡಿಸಿಲ್ಲ ಅಂದರೆ ಸರಿಯಲ್ಲ. ನಮ್ಮ ಅಣ್ಣನಿಗೆ ಕಾಲು ನೋವು ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ, ಸದರಿಯವರಿಗೆ ಆದ ನೋವಿನ ಬಗ್ಗೆ ನನ್ನ ಅರ್ಜಿಯಲ್ಲಿ ತಿಳಿಸಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಅಸಲ ದಾವಾ ನಂ 135/2011 ದಿನಾಂಕ 29.11.2023 ರಂದು ಇತ್ಯರ್ಥ ಆಗಿದೆ ಎಂದರೆ ನಿಜ. ಒಟ್ಟು ಮುಕ್ತಿಯಾರ ಪತ್ರವನ್ನು ಮಾಡುವ ಸಲುವಾಗಿ 1 ಮತ್ತು 2 ನೇ ಮೇಲ್ಮನವಿದಾರರು ನ್ಯಾಯಾಲಯಕ್ಕೆ ಬಂದಿದ್ದರು. ಆ ಸಮಯದಲ್ಲಿ ನಾವು ಹುಷಾರಾಗಿದ್ದೆವು ಅಂದರೆ ಸರಿಯಲ್ಲ. ವಕೀಲರಿಗೆ ಮಾಹಿತಿ ನೀಡಿ ಒಟ್ಟು ಮುಕ್ತಿಯಾರ ಪತ್ರವನ್ನು ತಯಾರಿಸಿದ್ದೇವೆ. ಸದರಿ ದಾಖಲೆ ಮಾಡಿಸುವ ಮುಂಚೆ ಎಲ್ಲಾ ದಾಖಲೆಗಳನ್ನು ನಾವು ತೆಗೆಸಿಕೊಂಡಿದ್ದೇವೆ ಎಂದರೆ ಸಾಕ್ಷಿ ಆಗ ನಮಗೆ ಹುಷಾರ ಇರಲಿಲ್ಲ ಅನ್ನುತ್ತಾರೆ. ನಿಪಿ-1 ರಿಂದ 12 ನ್ನು ಹೊರತು ಪಡಿಸಿ ಬೇರೆ ದಾಖಲೆಗಳು ಇರುವುದಿಲ್ಲ. ಒಟ್ಟು ಮುಕ್ತಿಯಾರ ಪತ್ರ ಮಾಡಲು ಬಂದಾಗ ಹಾಗೂ ದಾಖಲೆಗಳನ್ನು ತೆಗೆಸಿಕೊಳ್ಳುವಾಗ ನನಗೆ ಹುಷಾರ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಮೇಲ್ಮನವಿದಾರರಿಗೆ ಹೊಟ್ಟೆ ನೋವಿನ ಸಲುವಾಗಿ ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದಾರೆ. ಸದರಿಯವರಿಗೆ ಮೇ 2024 ರಲ್ಲಿ ಚಿಕಿತ್ಸೆ ಕೊಡಿಸಲಾಗಿದೆ ಅಂದರೆ ನಿಜ. ಆಸ್ಪತ್ರೆಯವರು ರೋಗಿಗಳ ಹತ್ತಿರ ಇರುವವರ ಹೆಸರು ಪಡೆದುಕೊಳ್ಳುತ್ತಾರೆ. ಆ ಸಮಯದಲ್ಲಿ ನಾನು ಹಾಗೂ 1 ನೇ ಮೇಲ್ಮನವಿದಾರ ಇರಲಿಲ್ಲ. 2 ನೇ ಮೇಲ್ಮನವಿದಾರರ ಸಹೋದರಿ ಸಿದ್ದವ್ವ ಇವರ ಸಹಿಯನ್ನು ಒಪ್ಪಿಗೆ ಅರ್ಜಿಗೆ ಸಹಿ ಪಡೆದುಕೊಂಡಿದ್ದಾರೆ ಅಂದರೆ ನಿಜ. ದಾವೆಯಲ್ಲಿ ತೀರ್ಪು ಆದ ನಂತರ ನಾವು 3 ಜನ ಚನ್ನಾಗಿ ಇದ್ದೆವು ಅಂದರೆ ಸರಿಯಲ್ಲ. ನಮಗೆ ಹಣಕಾಸಿನ ತೊಂದರೆ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾವು ಪ್ರತಿ ಕೆಲಸಕ್ಕೆ ಕಲಘಟಗಿಗೆ ಬಂದು ಹೋಗುತ್ತಿದ್ದು ವಕೀಲರನ್ನು ಭೇಟಿ ಆಗಲು ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಸಲ್ಲಿಸಿದ ದಾಖಲೆಗಳು ಮೇಲ್ಮನವಿ ಸಲ್ಲಿಸಿದ ನಂತರದ ದಾಖಲೆಗಳು ಅಂದರೆ ಸರಿಯಲ್ಲ. ದಿನಾಂಕ 30.08.2024 ರಂದು ಮೇಲ್ಮನವಿ ಸಲ್ಲಿಸಿದ್ದೇವೆ. ನಾನು ಹಾಜರ ಪಡಿಸಿದ ದಾಖಲೆಗೂ ಅರ್ಜಿಗೂ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ಎದುರುದಾರ

ನಂ 1 ಮತ್ತು 2 ರವರಿಗೆ ತೊಂದರೆ ನೀಡುವ ಸಲುವಾಗಿ ಮೇಲ್ಮನವಿ ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲ. ಎದುರುದಾರರು ಅಂತಿಮ ಡಿಕ್ರಿ ಕೋರಿ ಅರ್ಜಿ ಸಂಖ್ಯೆ 9/2024 ಸಲ್ಲಿಸಿದ್ದು ಅದರಲ್ಲಿ ನಾವು  ವಕೀಲರ ಮೂಲಕ ಹಾಜರಾಗಿದ್ದೇವೆ ಅಂದರೆ ನಿಜ. ನಮಗೆ ಎಲ್ಲಾ ವಿಷಯ ಗೊತ್ತಿದ್ದರೂ ಕೂಡಾ ತೊಂದರೆ ಕೊಡುವ ಸಲುವಾಗಿ ಸುಳ್ಳು ಅರ್ಜಿ ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**